# Frequently asked Questions
# ಸಂಭವನೀಯ ಪ್ರಶ್ನೆಗಳು ಮತ್ತು ಉತ್ತರಗಳು

## NTSE Online Application – Related

**ಪ್ರಶ್ನೆ 1**. NTSE ಪರೀಕ್ಷೆಯನ್ನು ತೆಗೆದುಕೊಳ್ಳಲು ಯಾವ ವಿದ್ಯಾರ್ಥಿಗಳು ಅರ್ಹರು?

**ಉತ್ತರ:–** 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಾಜ್ಯದ ಸರ್ಕಾರಿ, ಅನುದಾನಿತ, ಅನುದಾನರಹಿತ, ಕೇಂದ್ರೀಯ ವಿದ್ಯಾಲಯ, ನವೋದಯ, ಮೊರಾರ್ಜಿ ದೇಸಾಯಿ, ಆದರ್ಶ ಶಾಲೆಗಳು ಹಾಗೂ ಕೇಂದ್ರ ಪಠ್ಯಕ್ರಮ ಅನುಸರಿಸುತ್ತಿರುವ(CBSE/ICSE/IGCSE) ಶಾಲೆಗಳು, ಸೈನಿಕ ಶಾಲೆಗಳು, ಇತರೆ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳು NTSE ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಿರುತ್ತಾರೆ. (ಹೆಚ್ಚಿನ ಮಾಹಿತಿಗೆ ಸುತ್ತೋಲೆಯನ್ನು ಗಮನಿಸುವುದು).

**ಪ್ರಶ್ನೆ 2.** NTSE ಅರ್ಜಿಗಳನ್ನು ಹೇಗೆ ಸಲ್ಲಿಸುವುದು?

**ಉತ್ತರ:–** ಕೆ.ಎಸ್.ಇ.ಇ.ಬಿ ವೆಬ್‌ಸೈಟ್(www.http://kseeb.kar.nic.in/)ನಲ್ಲಿ ನೀಡಲಾಗಿರುವ ಶಾಲಾ ಲಾಗಿನ್ ಮೂಲಕ ಆನ್‌ಲೈನ್‌ನಲ್ಲಿ ಶಾಲಾ ಶಿಕ್ಷಕರು ಅರ್ಜಿಗಳನ್ನು ತುಂಬುವುದು. ದೂರ ಶಿಕ್ಷಣ ಮಾದರಿಯಲ್ಲಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ಮಾತ್ರ ಭೌತಿಕವಾಗಿ ಅರ್ಜಿಗಳನ್ನು ಸಲ್ಲಿಸುವುದು.

**ಪ್ರಶ್ನೆ 3.** NTSE ಪರೀಕ್ಷೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ಶೇ. ಎಷ್ಟು ಅಂಕಗಳನ್ನು ಗಳಿಸಿರಬೇಕು?

**ಉತ್ತರ:–** ಈ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಸಾಮಾನ್ಯ ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳು 9ನೇ ತರಗತಿಯಲ್ಲಿ ಕನಿಷ್ಠ ಶೇ.55 ರಷ್ಟು ಅಂಕಗಳನ್ನು ಗಳಿಸಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕನಿಷ್ಠ ಶೇ.45 ರಷ್ಟು ಅಂಕಗಳಿಸಿರಬೇಕು.

**ಪ್ರಶ್ನೆ 4**. ದೂರ ಶಿಕ್ಷಣ ಮಾದರಿಯಲ್ಲಿ (Open and Distance Learning - ODL) 10ನೇ ತರಗತಿಯನ್ನು ಓದುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ತೆಗೆದುಕೊಳ್ಳಬಹುದೆ?

**ಉತ್ತರ:–**ಹೌದು. ಪ್ರಸಕ್ತ ಸಾಲಿನಲ್ಲಿ 10ನೇ ತರಗತಿಗೆ ದೂರ ಶಿಕ್ಷಣ ಮಾದರಿಯಲ್ಲಿ (Open and Distance Learning - ODL) ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು 01–7–2019ಕ್ಕೆ 18ವರ್ಷ ದೊಳಗಿರಬೇಕು, ಪ್ರಥಮ ಬಾರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯಲು ನೋಂದಾಯಿಸಿಕೊಂಡಿರಬೇಕು ಹಾಗೂ ಯಾವುದೇ ಉದ್ಯೋಗದಲ್ಲಿರಬಾರದು. ಅಂತಹ ವಿದ್ಯಾರ್ಥಿಗಳಿಗೆ ಅರ್ಜಿಯು ಕೆ.ಎಸ್.ಇ.ಇ.ಬಿ. ವೆಬ್‌ಸೈಟ್‌ನಲ್ಲಿ ದೊರೆಯುತ್ತದೆ. ಸದರಿ ಅರ್ಜಿಯನ್ನು Download ಮಾಡಿಕೊಂಡು ಭರ್ತಿ ಮಾಡಿ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳ ದೃಢೀಕರಣ ಪಡೆದು ಅರ್ಜಿ ಮತ್ತು ದೃಢೀಕರಿಸಿದ ಪ್ರಮಾಣ ಪತ್ರಗಳನ್ನು **ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಕೆ.ಎಸ್.ಕ್ಯು.ಎ.ಎ.ಸಿ ವಿಭಾಗ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003** ಇಲ್ಲಿಗೆ ನೋಂದಾಯಿತ ಅಂಚೆಯ ಮೂಲಕ ಅರ್ಜಿ ಸಲ್ಲಿಸಲು ನೀಡಲಾದ ಅಂತಿಮ ದಿನಾಂಕ ಮುಗಿದ 5 ದಿನದೊಳಗಾಗಿ ಸಲ್ಲಿಸುವುದು.

**ಈ ಕಛೇರಿಯಲ್ಲಿ ಸ್ವೀಕೃತಗೊಂಡ ಅರ್ಜಿಗಳಲ್ಲಿರುವ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ ಪತ್ರವನ್ನು ವಿತರಿಸಲಾಗುವುದು. ಅರ್ಜಿಯೊಂದಿಗೆ ಲಗತ್ತಿಸಿರುವ ಚಲನ್ ಮೂಲಕ ಶುಲ್ಕ ಪಾವತಿಸುವುದು.**

**ಪ್ರಶ್ನೆ 5.** ಮುಖ್ಯಶಿಕ್ಷಕರು ಅರ್ಜಿ ಸಲ್ಲಿಸುವ ವಿಧಾನ ಹೇಗೆ?

**ಉತ್ತರ:** User Manual ನಲ್ಲಿ ನೀಡಿರುವ ವಿವರಣೆಯನ್ನು ಅನುಸರಿಸಿ ಮುಖ್ಯ ಶಿಕ್ಷಕರು ಅರ್ಜಿ ಸಲ್ಲಿಸುವುದು.

**ಪ್ರಶ್ನೆ 6**. UDISE ಮೂಲಕ Login ಆಗುವಾಗ ಶಾಲೆಯವರು ಯಾವ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು?

**ಉತ್ತರ:–**UDISE ಮೂಲಕ Login ಆಗುವಾಗ ಶಾಲೆಯ ಮುಖ್ಯಶಿಕ್ಷಕರು/ಪ್ರಾಂಶುಪಾಲರ ಮೊಬೈಲ್ ಸಂಖ್ಯೆಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಪ್ರಥಮ ಬಾರಿಗೆ ನಮೂದಿಸಲಾಗುವ ಮೊಬೈಲ್ ಸಂಖ್ಯೆಗೆ OTP ಯನ್ನು ನೀಡಲಾಗುವುದು. ಈ ನಂಬರ್ Register ಆಗಿರುತ್ತದೆ.

**ಪ್ರಶ್ನೆ 7**. UDISE ಬಳಸಿ ಬೇರೆ ಯಾರಾದರು Register ಆಗಿದ್ದರೆ ಏನು ಮಾಡುವುದು?

**ಉತ್ತರ:–**UDISE ಬಳಸಿ ಮುಖ್ಯ ಶಿಕ್ಷಕರೇ Register ಆಗಿ Login ಆಗಬೇಕು, ಒಂದು ವೇಳೆ ಮುಖ್ಯಶಿಕ್ಷಕರು ಲಾಗಿನ್ ಆಗಲು ಪ್ರಯತ್ನಪಟ್ಟಾಗ Already registered ಎಂಬುದಾಗಿ ತೋರಿಸುತ್ತಿದ್ದರೆ, ತಾವು ತಕ್ಷಣ ತಂತ್ರಾಂಶದಲ್ಲಿ ನಮೂದಾಗಿರುವ ಸಹಾಯವಾಣಿಗೆ ಕರೆ ಮಾಡಿ ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದಲ್ಲಿ ಅದನ್ನು ಬದಲಾವಣೆ ಮಾಡಿ Login ಆಗುವುದಕ್ಕೆ ಅವಕಾಶ

ಮಾಡಿಕೊಡಲಾಗುವುದು. (ಮುಖ್ಯಶಿಕ್ಷಕರೇ ಕಡ್ಡಾಯವಾಗಿ ಅರ್ಜಿ ಸಲ್ಲಿಸಬೇಕಾಗಿದ್ದು, ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ).

**ಪ್ರಶ್ನೆ 8**. ಇತರೆ ಶಾಲೆಯ ವಿದ್ಯಾರ್ಥಿಗಳ ಅರ್ಜಿಗಳನ್ನು ನಮ್ಮ ಶಾಲೆಯ Login ಮೂಲಕ ಮಾಡಬಹುದೆ?

**ಉತ್ತರ:–**Login ಆದ ಮೇಲೆ ವಿದ್ಯಾರ್ಥಿಯ ಎಸ್.ಎ.ಟಿ.ಎಸ್. ಸಂಕೇತವನ್ನು ಬಳಸುವ ಮೂಲಕ ಅಭ್ಯರ್ಥಿಯ ಅರ್ಜಿಯನ್ನು ಭರ್ತಿ ಮಾಡಬಹುದು. ಒಂದು ವೇಳೆ ತಪ್ಪು ಸಂಖ್ಯೆ ಅಂದರೆ ವಿದ್ಯಾರ್ಥಿಯು 10ನೇ ತರಗತಿಯಲ್ಲಿ ಓದುತ್ತಿಲ್ಲದ ಬೇರೆ ಯಾವುದೇ ತರಗತಿಯಲ್ಲಿ ಓದುತ್ತಿದ್ದರೆ ಅಂತಹವರ ಮಾಹಿತಿಯನ್ನು ಪಡೆಯಲು ಸಾಧ್ಯವಿರುವುದಿಲ್ಲ. ಹಾಗೂ ಪ್ರತಿ ಶಾಲೆಯವರು ತಮ್ಮ ಶಾಲೆಗೆ ಸಂಬಂಧಿಸಿದ ವಿದ್ಯಾರ್ಥಿಗಳ ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿದ್ದು ಬೇರೆ ಶಾಲೆಯ ವಿದ್ಯಾರ್ಥಿಗಳ ಅರ್ಜಿಯನ್ನು ಭರ್ತಿ ಮಾಡಲು ಸಾಧ್ಯವಿರುವುದಿಲ್ಲ.

**ಪ್ರಶ್ನೆ 9**. Login ಆದ ಮೇಲೆ ಅದೇ ಶಾಲೆಯ ಹಾಗೂ 10ನೇ ತರಗತಿಯಲ್ಲಿಯೇ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದರು ಎಸ್.ಎ.ಟಿ.ಎಸ್ ಸಂಕೇತವಿರುವುದಿಲ್ಲ ಅಂತಹ ಅಭ್ಯರ್ಥಿಯು ಹೇಗೆ ಅರ್ಜಿ ಸಲ್ಲಿಸುವುದು?

**ಉತ್ತರ:–** ಪ್ರತಿ ವಿದ್ಯಾರ್ಥಿಗೂ ಎಸ್.ಎ.ಟಿ.ಎಸ್ ಸಂಕೇತ ಕಡ್ಡಾಯವಾಗಿರುತ್ತದೆ. ಪ್ರತಿ ವಿದ್ಯಾರ್ಥಿಯು ಎಸ್.ಎ.ಟಿ.ಎಸ್.ನಲ್ಲಿ ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಈಗಾಗಲೇ ಎಸ್.ಎ.ಟಿ.ಎಸ್.ನಲ್ಲಿ ನೋಂದಾಯಿಸಿಕೊಳ್ಳದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಎಸ್.ಎ.ಟಿ.ಎಸ್.ನಲ್ಲಿ ನೋಂದಾಯಿಸಿ ನಂತರ ಅರ್ಜಿ ಭರ್ತಿ ಮಾಡಬೇಕು.

**ಪ್ರಶ್ನೆ 10**. Login ಆದ ಮೇಲೆ ವಿದ್ಯಾರ್ಥಿಯ ಮಾಹಿತಿಗಳು Screen ಮೇಲೆ ನಮೂದಾಗಿದ್ದು ಅವುಗಳಲ್ಲಿ ಕೆಲವು ತಪ್ಪುಗಳಿವೆ ಆದರೆ ಅದನ್ನು ಸರಿಪಡಿಸಲು ಸಾಧ್ಯವಾಗುತ್ತಿಲ್ಲ. ಅಂತಹ ಅಂಶಗಳನ್ನು ಹೇಗೆ ತಿದ್ದುಪಡಿ ಮಾಡುವುದು?

**ಉತ್ತರ:–** Screen ಮೇಲೆ ಬದಲಾವಣೆ ಮಾಡಲಾಗದೇ ಕಾಣುತ್ತಿರುವ ಮಾಹಿತಿಗಳು ಎಸ್.ಎ.ಟಿ.ಎಸ್ ತಂತ್ರಾಂಶದಿಂದ ನೇರವಾಗಿ ನಮೂದಾಗಿರುವ ಮಾಹಿತಿಗಳು. ಈ ಮಾಹಿಯನ್ನು ಈ ಅರ್ಜಿ ಸಲ್ಲಿಸುವಾಗ ಬದಲಾಯಿಸಲು ಸಾಧ್ಯವಿಲ್ಲ. ಒಂದು ವೇಳೆ ಬದಲಾವಣೆ ಮಾಡಬೇಕಾದರೆ ಮೊದಲು ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಸರಿಪಡಿಸಬೇಕು. ನಂತರ ಅಂದರೆ 24 ಗಂಟೆಗಳ ಬಳಿಕ ತಾವು ಬದಲಾಯಿಸಿರುವ ಮಾಹಿತಿಗಳು ಕಂಡುಬರುತ್ತದೆ. ಅದಾದ ನಂತರ ಅರ್ಜಿ ಸಲ್ಲಿಸುವುದು ಸೂಕ್ತವಾಗಿದೆ.

**ಪ್ರಶ್ನೆ 11**. ನ್ಯೂನ್ಯತೆ (Disability) ಆಧಾರದ ಮೇಲೆ ಅರ್ಜಿ ನಮೂದಿಸುವಂತಹ ಅಭ್ಯರ್ಥಿಗಳು ದಾಖಲೆಗಳನ್ನು ಒದಗಿಸಬೇಕೆ?

**ಉತ್ತರ:–**ಹೌದು, ನಮೂದಿಸಲಾಗಿರುವ ನ್ಯೂನ್ಯತೆಗೆ (Disability) ಸಂಬಂಧಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಮುಖ್ಯ ಶಿಕ್ಷಕರು ವಿದ್ಯಾರ್ಥಿಯಿಂದ ಪಡೆಯಬೇಕು. (ಸಕ್ಷಮ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ದಾಖಲೆಗಳನ್ನು ನೀಡಬೇಕು) ದಾಖಲೆಗಳನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಿ ತಮ್ಮ ಹಂತದಲ್ಲಿ ಕಾಯ್ದಿರಿಸುವುದು ಹಾಗೂ ಒದಗಿಸುವಂತೆ ನಿರ್ದೇಶಿಸಿದಾಗ ಒದಗಿಸುವುದು ಕಡ್ಡಾಯ.

**ಪ್ರಶ್ನೆ 12**. ಮೀಸಲಾತಿ ಆಧಾರದ ಮೇಲೆ ಅರ್ಜಿ ನಮೂದಿಸುವಂತಹ ಅಭ್ಯರ್ಥಿಗಳು ದಾಖಲೆಗಳನ್ನು ಒದಗಿಸಬೇಕೆ?

**ಉತ್ತರ:–**ಹೌದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗ(ಒ.ಬಿ.ಸಿ) ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ(EWSs)ಅಡಿಯಲ್ಲಿ ಮೀಸಲಾತಿ ಬಯಸುವವರು ಸಂಬಂಧಿಸಿದ ದಾಖಲೆಗಳನ್ನು ನೀಡುವುದು ಕಡ್ಡಾಯ. ಸದರಿ ದಾಖಲೆಗಳನ್ನು ಶಾಲೆಯ ಮುಖ್ಯಶಿಕ್ಷಕರು ವಿದ್ಯಾರ್ಥಿಗಳಿಂದ ಪಡೆದು ತಮ್ಮ ಹಂತದಲ್ಲಿ ಕಾಯ್ದಿರಿಸುವುದು ಕಡ್ಡಾಯ.

**ಪ್ರಶ್ನೆ 13**. ಒಂದು ಬಾರಿ Login ಆದ ಮೇಲೆ ಒಂದು ವಿದ್ಯಾರ್ಥಿಯ ಮಾಹಿತಿಯನ್ನು ಭರ್ತಿ ಮಾಡಿದ ನಂತರ ಬೇರೆ ಅಭ್ಯರ್ಥಿಯ ಮಾಹಿತಿಯನ್ನು ಭರ್ತಿ ಮಾಡಲು ಪುನಃ Login ಆಗುವ ಅವಶ್ಯಕತೆಯಿದೆಯೇ?

**ಉತ್ತರ:–**ಇಲ್ಲ, ಒಂದು ಬಾರಿ Login ಆಗಿ ಒಂದು ವಿದ್ಯಾರ್ಥಿಯ ಮಾಹಿತಿಯನ್ನು ಭರ್ತಿ ಮಾಡಿದ ನಂತರ Submit ಮಾಡುವುದು ನಂತರ Clear ಮಾಡಿ ಬೇರೆ ವಿದ್ಯಾರ್ಥಿಯ ಮಾಹಿತಿಯನ್ನು ಭರ್ತಿ ಮಾಡಬಹುದು.

**ಪ್ರಶ್ನೆ 14**. ಯಾವ ಯಾವ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಎಷ್ಟು ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು ?

| **ಸಂಸ್ಥೆಗಳು** | **ಪರೀಕ್ಷಾ ಶುಲ್ಕ** | |
|---|---|---|
| ಸರ್ಕಾರಿ/ಅನುದಾನಿತ (Government/ Aided) | ಸಾಮಾನ್ಯ, ಇತರೆ ಹಿಂದುಳಿದ ವರ್ಗ, ಆರ್ಥಿಕವಾಗಿ ಹಿಂದುಳಿದ ವರ್ಗ (EWSs) ಮತ್ತು ವಿಕಲಚೇತನ ವಿದ್ಯಾರ್ಥಿಗಳು | ರೂ.75/– |
| | ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗೆ | ರೂ.20/– |
| ಅನುದಾನ ರಹಿತ (Unaided) | ಸಾಮಾನ್ಯ, ಇತರೆ ಹಿಂದುಳಿದ ವರ್ಗ, ಆರ್ಥಿಕವಾಗಿ ಹಿಂದುಳಿದ ವರ್ಗ (EWSs) ಮತ್ತು ವಿಕಲಚೇತನ ವಿದ್ಯಾರ್ಥಿಗಳು | ರೂ.200/– |
| | ಪ.ಜಾ/ಪ.ಪಂ. ವಿದ್ಯಾರ್ಥಿಗಳಿಗೆ | ರೂ.50/– |